ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1109(1184)
2. ಸದಸ್ಯರ ಹೆಸರು: ಶ್ರೀಮತಿ ಎಸ್. ವೀಣಾ ಅಚ್ಚಯ್ಯ
3. ಉತ್ತರಿಸುವ ದಿನಾಂಕ: 22.09.2021
4. ಉತ್ತರಿಸುವ ಸಚಿವರು: ಕಂದಾಯ ಸಚಿವರು

	ಪ್ರಶ್ನೆ	ಉತ್ತರ
ಅ	ವಿದೇಶಿ ಪ್ರಜೆಗಳಿಗೆ ಕರ್ನಾಟಕದಲ್ಲಿ ಕೃಷಿ ಜಮೀನು ಖರೀದಿಸಲು ಅವಕಾಶವಿದೆಯೇ; (ಸಂಬಂಧಿಸಿದ ಆದೇಶಗಳ ಹಾಗೂ ನಿಯಮಗಳ ಪ್ರತಿ ನೀಡುವುದು)	ಇಲ್ಲ
ಆ	ಅವಕಾಶವಿದ್ದಲ್ಲಿ ವಿದೇಶಿ ಪ್ರಜೆಗಳು ಕರ್ನಾಟಕದಲ್ಲಿ ಕೃಷಿ ಜಮೀನು ಖರೀದಿಸಲು ಅನುಸರಿಸಬೇಕಾದ ವಿಧಾನ ಹಾಗೂ ನಿಯಮಗಳೇನು;(ಸಂಪೂರ್ಣ ವಿವರ ನೀಡುವುದು)	ವಿದೇಶಿ ಪ್ರಜೆಗಳಿಗೆ ಕರ್ನಾಟಕದಲ್ಲಿ ಕೃಷಿ ಜಮೀನು ಖರೀದಿಸಲು ಅವಕಾಶವಿರುವುದಿಲ್ಲ. ವಿದೇಶಿ ಪ್ರಜೆಯು ಭಾರತದಲ್ಲಿ ವಾಸಿಸುತ್ತಿದ್ದಲ್ಲಿ ಸಂಬಂಧಿಸಿದ ರಾಜ್ಯ ಸರ್ಕಾರದಿಂದ ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅನುಮತಿ ಪಡೆದು ಖರೀದಿಸಲು ಅವಕಾಶವಿರುತ್ತದೆ. (FEMA ಕಾಯ್ದೆಯಂತೆ)
ಇ	ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕು ಹುದಿಕೇರಿ ಹೋಬಳಿಯ ತೆರಾಲು ಗ್ರಾಮದಲ್ಲಿ ವಿದೇಶಿ ಪ್ರಜೆಗಳು ಕೃಷಿ ಜಮೀನನ್ನು ಖರೀದಿಸಿದಾರೆಯೇ; ಹಾಗೂ ಅವರ ಹೆಸರಿಗೆ ಖಾತೆಯಾಗಿದೆಯೇ;	ಉಪನೋಂದಣಾಧಿಕಾರಿ, ಪೊನ್ನಂಪೇಟೆ, ಕೊಡಗು ಜಿಲ್ಲೆ ಇವರ ಕಛೇರಿಯಲ್ಲಿ ನೋಂದಾಯಿಸಲಾದ ದಸ್ತಾವೇಜು ಸಂಖ್ಯೆ:521/97-98, ದಿನಾಂಕ:26.09.1997ರಲ್ಲಿ ತೆರಾಲು ಗ್ರಾಮದಲ್ಲಿ ಶ್ರೀ ಅನಿಲ್ ಕುಮಾರ್ ಮಲ್ಹೋತ್ರ ಮತ್ತು ಅವರ ಪತ್ನಿ ಪಮೇಲಾ ಗಾಲೆ ಮಲ್ಹೋತ್ರ ರವರು ಕೃಷಿ ಭೂಮಿಯನ್ನು ಖರೀದಿಸಿರುವುದು ದಾಖಲಾಗಿರುತ್ತದೆ. ನೋಂದಾಯಿತ ದಾಸ್ತುವೇಜುಗಳಲ್ಲಿ ಶ್ರೀ ಅನಿಲ್ ಕುಮಾರ್ ಮಲ್ಹೋತ್ರ ಮತ್ತು ಅವರ ಪತ್ನಿ ಪಮೇಲಾ ಗಾಲೆ ಮಲ್ಹೋತ್ರ ರವರು ತಾವು ತೆರಲು ಗ್ರಾಮ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ, ಇಲ್ಲಿ ನಿವಾಸಿಗಳೆಂದು ದಾಖಲಿಸಿಕೊಂಡಿರುತ್ತಾರೆ. ನೋಂದಾಯಿತ ದಾಸ್ತುವೇಜಿನಂತೆ ಜೆ-ನಮೂನೆಯನ್ನು ತಹಶೀಲ್ದಾರ್ ಕಛೇರಿಯಲ್ಲಿ ಸ್ವೀಕೃತವಾದ ಕಾರಣ ಮ್ಯುಟೇಷನ್ ಅಂಗಿಕರಿಸಲಾಗಿದೆ.

ಈ	ಸದರಿ ಜಮೀನು ಖರೀದಿ ಹಾಗೂ ಖಾತೆಯಾಗಿರುವುದು ನಿಯಮಾನುಸಾರ ವಾಗಿವೆಯೇ; ನಿಯಮಾನುಸಾರವಾಗಿರದಿದ್ದಲ್ಲಿ, ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;	ಈ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಕಂಇ 22 ಎಲ್‌ಆರ್‌ಎಸ್2021

(ಆರ್.ಅಶೋಕ)

ಕಂದಾಯ ಸಚಿವರು